ಉಪಾಧ್ಯಕ್ಷರು : ಇಲ್ಲಿ ಕೊಟ್ಟಿದ್ದಾರೆ. ತೆಗೆದುಕೊಳ್ಳುತ್ತೇನೆ. ಆರಗ ಜ್ಞಾನೇಂದ್ರರವರೇ, ಒಂದು ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಮಾಡನಾಡಿ.

ವಿಷಯ: ರೆವಿನ್ಯೂ ಸ್ಟ್ಯಾಂಪ್ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು

†**ಶ್ರೀ ಆರಗ ಜ್ಞಾನೇಂದ್ರ** : ಮಾನ್ಯ ಉಪಾಧ್ಯಕ್ಷರೆ, ಇನ್ನು ಮುಂದೆ ಸ್ಟ್ಯಾಂಪ್ ಪೇಪರ್‌ಗಳನ್ನು ಇನ್‌ಸಿಸ್ಟ್ ಮಾಡುವುದಿಲ್ಲವೆಂದು ಈಗಾಗಲೇ ಸರ್ಕಾರ ಹೇಳಿದೆ. ಅದರಲ್ಲೂ ವಿಶೇಷವಾಗಿ ಒಂದು ರೂಪಾಯಿ, ಎರಡು ರೂಪಾಯಿ ರೆವಿನ್ಯೂ ಸ್ಟ್ಯಾಂಪ್‌ಗಳನ್ನು ಈಗಲೂ ಕೂಡ ಅನೇಕ ಕಛೇರಿಗಳಲ್ಲಿ ಇನ್‌ಸಿಸ್ಟ್ ಮಾಡುತ್ತಿದ್ದಾರೆ. ಇದಕ್ಕಾಗಿ ಸಾಕಷ್ಟು ಪರದಾಟ ನಡೆಯುತ್ತಿದೆ. 20 ರೂಪಾಯಿ, 30 ರೂಪಾಯಿಗಳಿಗೆಲ್ಲಾ ಇವು ವ್ಯಾಪಾರವಾಗುತ್ತಿವೆ. ಇಂಥ ಒಂದು ಪರಿಸ್ಥಿತಿಯಲ್ಲಿ ಸಾಮಾನ್ಯ ಜನರ ಪರದಾಟವನ್ನು ತಪ್ಪಿಸುವುದಕ್ಕೆ ಸರ್ಕಾರ ಏನನ್ನಾದರೂ ಮಾಡಬೇಕೆಂದು ಹೇಳಿ ಕಳೆದ ಅಧಿವೇಶನದಲ್ಲಿ ಹೇಳಿತ್ತು. ನೀವು ಸ್ಟ್ಯಾಂಪ್‌ಗಳನ್ನು ಒದಗಿಸಿ, ಒದಗಿಸದಿದ್ದರೆ ಸ್ಟ್ಯಾಂಪ್‌ಗಳನ್ನು ಇನ್‌ಸಿಸ್ಟ್ ಮಾಡುವುದನ್ನು ಕೈಬಿಡಿ ಎಂದು ನಾವು ಹೇಳಿದ್ದೆವು. ಇವೆರಡರ ಬಗ್ಗೆಯೂ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿಕೆಯನ್ನು ಸರ್ಕಾರ ಮಾಡಿಲ್ಲ. ಇವೊತ್ತು ಸಾಮಾನ್ಯ ಜನರು ಈ ಸ್ಟ್ಯಾಂಪ್‌ಗಾಗಿ ಎಲ್ಲೆಲ್ಲೋ ತಿರುಗಾಡಿಕೊಂಡು ಪರದಾಡುತ್ತಿದ್ದಾರೆ. ಕೆಲವರು ಇದೇ ಒಂದು ಅವಕಾಶ ಎಂದು ತಿಳಿದು ಸ್ಟ್ಯಾಂಪ್ ಪೇಪರ್‌ಗಳನ್ನು ಬ್ಲ್ಯಾಕ್‌ನಲ್ಲಿ ಮಾರತಕ್ಕಂಥ ಜನರು ಸಾಕಷ್ಟು ಹುಟ್ಟಿಕೊಂಡಿದ್ದಾರೆ. ಸಾಕಷ್ಟು ಹೆಚ್ಚು ಹಣಕ್ಕೆ ಈ ಸ್ಟ್ಯಾಂಪ್ ಪೇಪರ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ರೀತಿಯಿಂದಾಗಿ ಒಂದು ಕಡೆ ಜನರಿಂದ ಹಣದ ಸುಲಿಗೆ ಆಗುತ್ತಿದ್ದರೆ ಇನ್ನೊಂದು ಕಡೆ ಜನರಿಗೆ ಕಾಲದ ಅಪವ್ಯಯವೂ ಕೂಡ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದಯಮಾಡಿ ಸರ್ಕಾರ ಈ ಬಗ್ಗೆ ಏನಾದರೂ ಗಮನ ಹರಿಸದಿದ್ದರೆ ಸಾಮಾನ್ಯ ಜನರಿಗೆ ಹೆಚ್ಚು ತೊಂದರೆಯಾಗುತ್ತದೆ. ಸರ್ಕಾರ ಈ ಬಗ್ಗೆ ಗಮನಿಸಿ ತಕ್ಷಣವೇ ಇದಕ್ಕೆ ಒಂದು ಪರಿಹಾರವನ್ನು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

†**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** : ಮಾನ್ಯ ಉಪಾಧ್ಯಕ್ಷರೆ, ಈಗ ಹತ್ತು ರೂಪಾಯಿವರೆಗೆ ಇದೆ. ಈ 50 ರೂಪಾಯಿ, 100 ರೂಪಾಯಿವರೆಗಾದರೂ ಈ ಸ್ಕಾಲ್ ಮೊತ್ತದೇನಿದೆ ಅದರಲ್ಲಿ ತಾವು ಇದನ್ನು ಜಾರಿಗೆ ತೆಗೆದುಕೊಂಡು ಬಂದರೆ ಅದರಿಂದ ಏನೂ ತೊಂದರೆಯಾಗುವುದಿಲ್ಲ. ನೀವು 500, 1000, 10000 ರೂಪಾಯಿ ಸ್ಟ್ಯಾಂಪ್ ಪೇಪರ್ ಇನ್‌ಸಿಸ್ಟ್ ಮಾಡುತ್ತಿದ್ದಾಗ ಹಿಂದೆ ಫೀಕ್ ಸ್ಟ್ಯಾಂಪ್ ಪೇಪರ್‌ಗಳ ಹಾವಳಿ ನಡೆಯಿತು. ಆದ್ದರಿಂದ 50 ರೂಪಾಯಿ, 100 ರೂಪಾಯಿ ವರೆಗೆ ನೀವು ಲಿಮಿಟ್‌ವರೆಗೆ ನೀವು ಸ್ಟ್ಯಾಂಪ್ ಪೇಪರ್ ಜಾರಿಗೆ ತಂದರೆ ಏನೂ ಆಗುವುದಿಲ್ಲ. ಈಗೇನಾಗಿದೆ ಎಂದರೆ ಕೋರ್ಟ್ ಫೀಸ್ ತುಂಬುವಲ್ಲಿ, ಕೋರ್ಟ್‌ನಲ್ಲಿ ಅಫಿಡೆವಿಟ್ ಮಾಡುವುದಕ್ಕೆ, ಮತ್ತೊಂದಕ್ಕೆ ಅವರು ಬ್ಯಾಂಕ್‌ಗೆ ಹೋಗಿ ನಿಲ್ಲುವಂಥದ್ದು ಆಗಿ ಎಲ್ಲವೂ ಪ್ರಾಬ್ಲಮ್ ಆಗುತ್ತಿವೆ.

ಅದಕ್ಕಾಗಿ ಕೊನೆಪಕ್ಷ 50 ರೂಪಾಯಿಯಿಂದ ನೂರು ರೂಪಾಯಿಯವರೆಗೆ ನೀವು ಸ್ಟ್ಯಾಂಪ್ ಪೇಪರ್ ಅಲೋ ಮಾಡಿದರೆ ಅದರಿಂದ ಏನೂ ತೊಂದರೆಯಾಗುವುದಿಲ್ಲ. ಫೇಕ್ ಸ್ಟಾಂಪ್ ಪೇಪರ್ ಬಗ್ಗೆ ಏನು ಅವ್ಯವಹಾರವಾಗಿದೆ ಅದರಿಂದ ಏನೂ ತೊಂದರೆಯಾಗುವುದಿಲ್ಲ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಅದರ ಬಗ್ಗೆ ಚಿಂತೆ ಮಾಡಬಹುದು. ಇಲ್ಲಿ ಆರ್ಡಿನರಿ ಪಬ್ಲಿಕ್‌ಗೆ, ಕ್ಲೈಂಟ್ಸ್‌ಗೆ ಕೋರ್ಟ್‌ನಲ್ಲಿ ಬಹಳಷ್ಟು ತೊಂದರೆಯಾಗಿದೆ. ಇದರ ಬಗ್ಗೆ ರೀಥಿಂಕ್ ಮಾಡಬೇಕಾಗಿದೆ.

ಉ) ವಿಷಯ: ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನ ಕೊಡುವ ಬಗ್ಗೆ

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಗೋವಾ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹವರು ಸಾಕಷ್ಟು ನಮ್ಮ ಕರ್ನಾಟಕದಿಂದ ಬಂದಿದ್ದಾರೆ. ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಈ ಹೋರಾಟದಲ್ಲಿ ಭಾಗವಹಿಸಿರುವವರಿದ್ದಾರೆ. ಮಹಾರಾಷ್ಟ್ರದಲ್ಲಿ ಇದ್ದಾರೆ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಇದ್ದಾರೆ. ಆದರೆ ಶೇಕಡ 60 ಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯ ಯೋಧರು ನಮ್ಮ ರಾಜ್ಯದಲ್ಲಿ ಹೋರಾಟ ಮಾಡಿದಂತಹವರು ಇದ್ದಾರೆ. ನಮ್ಮ ರಾಜ್ಯ ಸರ್ಕಾರದಿಂದ ಈ ಹಿಂದೆ ಕೆಲವು ವರ್ಷಗಳವರೆಗೆ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಪೆನ್‌ಷನ್ ಕೊಡಲಾಗಿತ್ತು. ಅವರಿಗೆ ನಾಲ್ಕೈದು ವರ್ಷದವರೆಗೆ ಕೊಟ್ಟರು. ಆದರೆ ಇತ್ತೀಚೆಗೆ ಮೂರ್ನಾಲ್ಕು ವರ್ಷದಿಂದ ಈ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವಂತಹ ಗೌರವಧನವನ್ನು ನಿಲ್ಲಿಸಿರುವುದು ನಮ್ಮ ಮುಂದೆ ಇದೆ. ಹೀಗಾಗಿ ಇದರ ಬಗ್ಗೆ ಈ ಹಿಂದೆ ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಪ್ರಸ್ತಾಪವಾಯಿತು. ಒಂದು ಹಂತದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವಂತಹ ಮಾತೂ ಕೂಡ ಬಂತು. ಆದರೆ ಇವತ್ತು ಮಹಾರಾಷ್ಟ್ರ ರಾಜ್ಯ ಸರ್ಕಾರ ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಂತಹ ಹೋರಾಟಗಾರರಿಗೆ ಇವತ್ತಿನವರೆಗೂ ಕೂಡ ಗೌರವಧನವನ್ನು ಕೊಡುವಂತಹ ಪದ್ಧತಿಯನ್ನು ಮುಂದುವರೆಸಿದ್ದಾರೆ. ಮತ್ತು ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಕೆಲವೊಂದು ಲಿಮಿಟೆಡ್ ವ್ಯಕ್ತಿಗಳಿಗೆ ಅದನ್ನುಕೊಡಬೇಕೆಂದು ಬಿಲ್ ಪಾಸ್ ಮಾಡಿದ್ದಾರೆ. ಹೀಗಾಗಿ ನಮ್ಮ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಒಂದು ಪ್ರಪೋಸಲ್ ಹೋದರೆ ಅಲ್ಲಿಂದ ಕೂಡ ನಾವು ಕೊಡಿಸಬಹುದು ಮತ್ತು ರಾಜ್ಯ ಸರ್ಕಾರದಿಂದ ಮನಸ್ಸು ಮಾಡಿದರೆ ಆ ಒಂದು ಗೌರವಧನವನ್ನು ಮುಂದುವರೆಸುವುದಕ್ಕೆ ಸಾಧ್ಯತೆ ಇದೆ. ಹಿಂದೆ ಏನು ಪ್ರಶ್ನೆ ಬಂತು ಎಂದರೆ ಹಿಂದೆ ಕೊಡುವಂತಹ ಸಂದರ್ಭದಲ್ಲಿ ಬಹಳಷ್ಟು ಜನ ಖೊಟ್ಟೆ ಸ್ವಾತಂತ್ರ್ಯ ಯೋಧರು ಇದ್ದಾರೆ ಎನ್ನುವ ಮಾತು ಬಂದಿತು. ಅದಕ್ಕಾಗಿ ಇದನ್ನು ನಿಲ್ಲಿಸಿದರು ಎನ್ನುವ ವಿಚಾರ ಇದೆ. ಅದಕ್ಕೋಸ್ಕರ ಒಂದು ಇಂಡಿಪೆಂಡೆಂಟ್ ಏಜೆನ್ಸಿ ಮಾಡಿ, ಅದರಲ್ಲಿ ಯಾರು ನಿಜವಾಗಿ ಹೋರಾಟ ಮಾಡಿದ್ದಾರೆ ಅವರಿಗೆ ಕೊಡುವಂತಹ ಕೆಲಸವಾಗಬೇಕು. ಅದರಲ್ಲಿ ಯಾರು ಖೊಟ್ಟ ಸ್ವಾತಂತ್ರ್ಯ ಯೋಧರು ಇದ್ದಾರೆ ಅವರನ್ನು ತೆಗೆದು ಹಾಕುವಂತಹ ಕೆಲಸವಾಗಬೇಕು. ಬಹಳಷ್ಟು ಜನ ನಮ್ಮ ಹತ್ತಿರ ಬಂದಿದ್ದಾರೆ. ಅವರಿಗೆ 70 ರಿಂದ 80 ವರ್ಷವಾಗಿದೆ. ಅವರು ಅಲ್ಲಿ ಎಲ್ಲಾ ಮನೆಗೆ ಹೋಗುತ್ತಿದ್ದಾರೆ. ಮತ್ತು ನೋಡಿ ನಮಗೆ ಕೊನೆ ಹಂತದಲ್ಲಿ ಈ ಪರಿಸ್ಥಿತಿ ಇದೆ ದಯವಿಟ್ಟು ಇದನ್ನು ರಾಜ್ಯ ಸರ್ಕಾರದಲ್ಲಿ ಕೊಡಿಸಿ ಎಂದು ಹೇಳುವಂತಹ ದಯನೀಯ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ, ಇನ್ನಿತರ ಸಚಿವರ ಹತ್ತಿರ, ನಮ್ಮ ಪ್ರತಿಪಕ್ಷಗಳ ನಾಯಕರ ಹತ್ತಿರ ಹೋಗಿದ್ದರು. ಅವರು ಡೆಲ್ಲಿಯ ನಾಯಕರುಗಳವರೆಗೆ ಕೂಡ ಹೋಗಿದ್ದಾರೆ. ಹಾಗಾಗಿ ದಯವಿಟ್ಟು ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ಈ ಒಂದು ಗೋವಾ ಹೊರಾಟಗಾರರ ಸಲುವಾಗಿ ಗೌರವಧನವನ್ನು ಕೊಡುವಂತಹ ವಿಚಾರದಲ್ಲಿ ಅದನ್ನು ಮುಂದುವರೆಸಬೇಕೆಂದು ಒತ್ತಾಯ ಮಾಡುತ್ತೇನೆ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)